ರಾಜ್ಯದಲ್ಲಿ ಗ್ರಂಥಾಲಯಗಳ ಅವ್ಯವಸ್ಥೆ

1586 (1985) ಶ್ರೀ ಕೆ.ಎನ್. ಸುಬ್ಬಾರೆಡ್ಡಿ (ಬಸವನಗುಡಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಹಲವಾರು ಪ್ರದೇಶಗಳಲ್ಲಿ ಸಾರ್ವಜನಿಕ ಗ್ರಂಥಾಲಯಗಳ ಅವ್ಯವಸ್ಥೆಗಳಿಂದ ಕೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ವಯಸ್ಕರ ಶಿಕ್ಷಣ ಇಲಾಖೆ ಕುರಿತು

1587 (1986) ಶ್ರೀ ಕೆ.ಎನ್. ಸುಬ್ಬಾರೆಡ್ಡಿ (ಬಸವನಗುಡಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಯಸ್ಕರ ಶಿಕ್ಷಣಕ್ಕೆ ಕಳೆದ ಮೂರು ವರ್ಷಗಳಲ್ಲಿ ನಿಗದಿ ಮಾಡಿದ ಹಣವೆಷ್ಟು?

ಆ) ಅವಧಿಯಲ್ಲಿ ಇದರ ಪ್ರಯೋಜನೆ ಪಡೆದವರ ಸಂಖ್ಯೆ ಎಷ್ಟು?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ವಯಸ್ಕರ ಶಿಕ್ಷಣಕ್ಕೆ ಕಳೆದ ಮೂರು ವರ್ಷಗಳಲ್ಲಿ ರೂ. 1751.80 ಲಕ್ಷಗಳನ್ನು ನಿಗದಿಪಡಿಸಲಾಗಿದೆ. ಇದರಲ್ಲಿ ಯೋಜನೆ ಬಾಬ್ತು ರೂ. 938.92 ಲಕ್ಷಗಳು. ಯೋಜನೇತರ ಬಾಬ್ತು ರೂ. 812.88 ಲಕ್ಷಗಳು ಇದಲ್ಲದೆ ಕೇಂದ್ರದಿಂದ ರೂ.446.23 ಲಕ್ಷ ಹಣ ಬಿಡುಗಡೆಯಾಗಿದೆ.

ಆ) ಈ ಅವಧಿಯಲ್ಲಿ ಇದರ ಪ್ರಯೋಜನ ಪಡೆದು 14.02 ಲಕ್ಷ ಜನರು ಸಾಕ್ಷರಸ್ಥರಾಗಿರುತ್ತಾರೆ. ಇದಲ್ಲದೆ ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯವರ ತರಬೇತಿಯ ಪ್ರಯೋಜನವನ್ನು 2073 ವಿದ್ಯಾರ್ಥಿಗಳು ಪಡೆದಿರುತ್ತಾರೆ.

ಹೊಸದಾಗಿ ಪ್ರಥಮಿಕ ಆರೋಗ್ಯ ಘಟಕಗಳನ್ನು ತೆರೆಯವ ಬಗ್ಗೆ

1588 (1987) ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರಿನ ಚಾಮರಾಜ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಪ್ರಾಥಮಿಕ ಆರೋಗ್ಯ ಘಟಕಗಳು ಯಾವುವು?

ಆ) ಸದರಿ ಕ್ಷೇತ್ರಕ್ಕೆ ಹೊಸದಾಗಿ ಪ್ರಾಥಮಿಕ ಆರೋಗ್ಯ ಘಟಕ ಮಂಜೂರು ಮಾಡಲಾಗಿದೆಯೇ?